## ಸುರತ್ಕಲ್ ಎನ್‌ಐಟಿಕೆ: ₹ 132 ಕೋಟಿ ವೆಚ್ಚ; ವಿದ್ಯಾರ್ಥಿಗಳ ವಸತಿಗೆ ಅತ್ಯಾಧುನಿಕ ಸೌಲಭ್ಯ

# 3 ಹಾಸ್ಟೆಲ್ ಲೋಕಾರ್ಪಣೆಗೊಳಿಸಿದ ಪ್ರಧಾನಿ

ಪ್ರಜಾವಾಣಿ ವಾರ್ತೆ

**ಮುಖ್ಯಾಂಶಗಳು**

- ಪುರುಷರ 2 ಹಾಸ್ಟೆಲ್‌ಗಳಲ್ಲಿ ಒಟ್ಟು 1,100 ಮಂದಿ ಉಳಿದುಕೊಳ್ಳಲು ವ್ಯವಸ್ಥೆ
- ಮಹಿಳೆಯರ ಹಾಸ್ಟೆಲ್‌ನಲ್ಲಿ 424 ಮಂದಿಗೆ ವಸತಿ ಸೌಕರ್ಯ

ಮಂಗಳೂರು: ಸುರತ್ಕಲ್‌ನ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಕರ್ನಾಟಕ (ಎನ್‌ಐಟಿಕೆ) ಸಂಸ್ಥೆಯಲ್ಲಿ ಒಟ್ಟು ₹ 132 ಕೋಟಿ ಮೊತ್ತದಲ್ಲಿ ನಿರ್ಮಿಸಿರುವ ಬ್ರಹ್ಮಗಿರಿ, ಶಿವಾಲಿಕ್ ಮತ್ತು ಗೋದಾವರಿ ವಿದ್ಯಾರ್ಥಿನಿಲಯ ಕಟ್ಟಡಗಳನ್ನು ಪ್ರಧಾನಿ ನರೇಂದ್ರ ಮೋದಿಯವರು ಮಂಗಳವಾರ ವಿಡಿಯೊ ಕಾನ್ಫರೆನ್ಸ್ ಮೂಲಕ ಲೋಕಾರ್ಪಣೆಗೊಳಿಸಿದರು.

ಕೇಂದ್ರ ಸರ್ಕಾರದ ಅನುದಾನದಿಂದ ದೇಶದ 37 ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ, 44 ಶಾಲಾ ಶಿಕ್ಷಣ ಸಂಸ್ಥೆಗಳಲ್ಲಿ ಹಾಗೂ ಎರಡು ಕೌಶಲ ಶಿಕ್ಷಣ ಸಂಸ್ಥೆಗಳಲ್ಲಿ ಅನುಷ್ಠಾನಗೊಳಿಸಲಾದ ಒಟ್ಟು ₹13,300 ಕೋಟಿಗೂ ಹೆಚ್ಚು ಮೊತ್ತದ ಕಾಮಗಾರಿಗಳಿಗೆ ಅವರು ಕಾಶ್ಮೀರದಲ್ಲಿ ಚಾಲನೆ ನೀಡಿದರು.

ಸಂಸದ ನಳಿನ್ ಕುಮಾರ್ ಕಟೀಲ್ ಮಾತನಾಡಿ, 'ಶ್ರೀನಿವಾಸ ಮಲ್ಯರ ದೂರ ದೃಷ್ಟಿಯಿಂದ 1960ರಲ್ಲಿ ಸ್ಥಾಪನೆಯಾದ ಈ ಸಂಸ್ಥೆ ದೇಶದ 12 ಪ್ರತಿಷ್ಠಿತ ಎಂಜಿನಿಯರಿಂಗ್ ಕಾಲೇಜುಗಳಲ್ಲಿ ಒಂದಾಗಿದೆ. ಇದು ದಕ್ಷಿಣ ಕನ್ನಡ ಜಿಲ್ಲೆಯವರಿಗೆ ಹೆಮ್ಮೆಯ ವಿಷಯ' ಎಂದರು.

'ನಾನು 15 ವರ್ಷಗಳಿಂದ ಸಂಸದನಾಗಿದ್ದೇನೆ. ಮನಮೋಹನ ಸಿಂಗ್ ಪ್ರಧಾನಿಯಾಗಿದ್ದ ಐದು ವರ್ಷಗಳಲ್ಲಿ ಜಿಲ್ಲೆಗೆ ಕೇಂದ್ರ ಸರ್ಕಾರದಿಂದ ₹ 4500 ಕೋಟಿ ಅನುದಾನ ಬಂದಿತ್ತು. ನರೇಂದ್ರ ಮೋದಿ ಪ್ರಧಾನಿಯಾದ ಬಳಿಕದ 10 ವರ್ಷಗಳಲ್ಲಿ ಜಿಲ್ಲೆಗೆ ₹ 79 ಸಾವಿರ ಕೋಟಿ ಅನುದಾನ ಬಂದಿದೆ. 10 ವರ್ಷಗಳಲ್ಲಿ ಎನ್‌ಐಟಿಕೆಗೆ ₹ 588 ಕೋಟಿ ಅನುದಾನ ಸಿಕ್ಕಿದೆ. ಪ್ರಧಾನಮಂತ್ರಿ ಉನ್ನತ ಶಿಕ್ಷಣ ಅಭಿಯಾನ (ಉಷಾ) ಯೋಜನೆಯಡಿ ಸಂಶೋಧನಾ ಚಟುವಟಿಕೆಗಾಗಿ ₹ 20 ಕೋಟಿ ಅನುದಾನ ಮಂಗಳೂರು ವಿಶ್ವವಿದ್ಯಾಲಯಕ್ಕೆ ಮಂಜೂರಾಗಿದೆ' ಎಂದರು.





ಸುರತ್ಕಲ್‌ನ ಎನ್‌ಐಟಿಕೆ ಪ್ರಾಂಗಣದಲ್ಲಿ ನಿರ್ಮಾಣವಾಗಿರುವ ವಿದ್ಯಾರ್ಥಿನಿಲಯ ಕಟ್ಟಡಗಳನ್ನು ಪ್ರಧಾನಿ ನರೇಂದ್ರ ಮೋದಿ ಅವರು ವಿಡಿಯೊ ಕಾನ್ಫರೆನ್ಸ್ ಮೂಲಕ ಉದ್ಘಾಟಿಸಿದ್ದನ್ನು ಗಣೇಶ್ ಕಾರ್ಣಿಕ್, ನಳಿನ್ ಕುಮಾರ್ ಕಟೀಲ್, ಪ್ರೊ.ಬಿ.ರವಿ, ಶ್ವೇತಾ ಹಾಗೂ ಶೋಭಾ ಮತ್ತಿತರರು ಮಂಗಳವಾರ ದೊಡ್ಡ ಪರದೆಯಲ್ಲಿ ವೀಕ್ಷಿಸಿದರು (ಎಡಚಿತ್ರ). ಎನ್‌ಐಟಿಕೆ ಪ್ರಾಂಗಣದಲ್ಲಿ ನಿರ್ಮಾಣವಾಗಿರುವ ಶಿವಾಲಿಕ್ ವಿದ್ಯಾರ್ಥಿ ನಿಲಯ– ಪ್ರಜಾವಾಣಿ ಚಿತ್ರ

ಎನ್‌ಐಟಿಕೆ ನಿರ್ದೇಶಕ ಪ್ರೊ.ಬಿ.ರವಿ, 'ದೇಶದ ಭವಿಷ್ಯದ ಹಿತದೃಷ್ಟಿಯಿಂದ ಶಿಕ್ಷಣ ರಂಗದಲ್ಲಿ ಭಾರಿ ಹೂಡಿಕೆ ಮಾಡಲಾಗುತ್ತಿದೆ. ವಿದ್ಯಾರ್ಥಿಗಳಿಗೆ ಸುಸಜ್ಜಿತ ಸೌಕರ್ಯಗಳನ್ನು ಒದಗಿಸುವ ನಮ್ಮ ಸಂಸ್ಥೆಯ ಬದ್ಧತೆಗೆ ಈ ವಿದ್ಯಾರ್ಥಿನಿಲಯಗಳೇ ಸಾಕ್ಷಿ. ಈ ಹೊಸ ಸೌಕರ್ಯಗಳ ಸೇರ್ಪಡೆಯಿಂದ ಸಂಸ್ಥೆಯ ಶೈಕ್ಷಣಿಕ ವಾತಾವರಣ ಮತ್ತಷ್ಟು ಉನ್ನತ ದರ್ಜೆಗೆ ಏರಲಿದೆ' ಎಂದರು.

'ಎನ್‌ಐಟಿಕೆ ನೇತೃತ್ವದ ಶಿಕ್ಷಣ ಸಂಸ್ಥೆಗಳ ಒಕ್ಕೂಟವು 'ಚತುರ ಸುಸ್ಥಿರ ಪ್ರಾಂಗಣ'ಗಳನ್ನು ಅಭಿವೃದ್ಧಿಪಡಿಸುವ ಕಾರ್ಯಯೋಜನೆ ಸಿದ್ಧಪಡಿಸಿದೆ. ದೇಶದ ಬೇರೆ ಬೇರೆ ಶಿಕ್ಷಣ ಸಂಸ್ಥೆಗಳ 15ರಿಂದ 16 ಒಕ್ಕೂಟಗಳು ಇಂತಹದ್ದೇ ಕಾರ್ಯಯೋಜನೆಗಳನ್ನು ಹೊಂದಿವೆ. ಈ ಕುರಿತ ಅಂತಿಮ ಸ್ಪರ್ಧೆಯಲ್ಲಿ ನಮ್ಮ ಕಾರ್ಯಯೋಜನೆಯೇ ಆಯ್ಕೆ ಆಗಲಿದೆ ಎಂಬ ವಿಶ್ವಾಸ ನಮ್ಮದು' ಎಂದು ತಿಳಿಸಿದರು.

ಎನ್‌ಐಟಿಕೆ ಡೀನ್ ಪ್ರೊ. ಚಿತ್ತರಂಜನ್ ಹೆಗ್ಡೆ, 'ಗೋದಾವರಿ ಮಹಿಳೆಯರ ವಿದ್ಯಾರ್ಥಿನಿಲಯವನ್ನು ₹ 38 ಕೋಟಿ ಮೊತ್ತದಲ್ಲಿ ನಿರ್ಮಿಸಲಾಗಿದ್ದು, ಇಬ್ಬರು ಉಳಿದುಕೊಳ್ಳುವಂತಹ 212 ಕೊಠಡಿಗಳಿವೆ. ಪುರುಷರಿಗಾಗಿ ಬ್ರಹ್ಮಗಿರಿ ವಿದ್ಯಾರ್ಥಿನಿಲಯ ಕಟ್ಟಡವನ್ನು ₹51 ಕೋಟಿ ಮೊತ್ತದಲ್ಲಿ ನಿರ್ಮಿಸಲಾಗಿದೆ. ಒಬ್ಬ ವ್ಯಕ್ತಿ ಉಳಿದುಕೊಳ್ಳಬಹುದಾದ 500 ಕೊಠಡಿಗಳನ್ನು ನಿರ್ಮಿಸಲಾಗಿದೆ. ಮೂವರು ಉಳಿದುಕೊಳ್ಳುವ ವ್ಯವಸ್ಥೆ ಇರುವ 200 ಕೊಠಡಿಗಳನ್ನು ಹೊಂದಿರುವ ಶಿವಾಲಿಕ್ ವಿದ್ಯಾರ್ಥಿನಿಲಯವನ್ನು ₹ 43ಕೋಟಿ ಮೊತ್ತದಲ್ಲಿ ನಿರ್ಮಿಸಲಾಗಿದೆ' ಎಂದು ಮಾಹಿತಿ ನೀಡಿದರು.

ಪಾಲಿಕೆ ಸದಸ್ಯರಾದ ಶೋಭಾ ಮತ್ತು ಶ್ವೇತಾ ಹಾಗೂ ಬಿಜೆಪಿ ಮುಖಂಡ ಗಣೇಶ ಕಾರ್ಣಿಕ್ ಭಾಗವಹಿಸಿದ್ದರು.

Prajavani, Date:21/02/24, p. no - 05